ಬೆಂಗಳೂರು
ನಗರ ವಿಶ್ವವಿದ್ಯಾನಿಲಯ

BENGALURU
CITY UNIVERSITY

Office of the Registrar, Central College Campus, Dr. B.R. Ambedkar Veedhi, Bengaluru – 560 001.
PhNo.080-22131385, E-mail: registrarbcu@gmail.com

ಸಂಖ್ಯೆ: ಬೆಂ.ನ.ವಿ/ಎಸ್‌ವೈಎನ್–14/231/2021–22 ದಿನಾಂಕ: 07.10.2021

ಗೆ,
ಮಾನ್ಯ ಸಿಂಡಿಕೇಟ್ ಸದಸ್ಯರು,
ಬೆಂಗಳೂರು ನಗರ ವಿಶ್ವವಿದ್ಯಾನಿಲಯ
ಬೆಂಗಳೂರು–560 001

ಮಾನ್ಯರೆ,

**ವಿಷಯ: ದಿನಾಂಕ 30.09.2021 ರಂದು ಜರುಗಿದ 14ನೇ ಸಿಂಡಿಕೇಟ್ ಸಾಮಾನ್ಯ ಸಭೆಯ ನಡವಳಿಗಳು**

*****

ದಿನಾಂಕ **30.09.2021** ರಂದು ಪೂರ್ವಾಹ್ನ 11.00 ಗಂಟೆಗೆ ಜರುಗಿದ ಸಿಂಡಿಕೇಟ್ 14ನೇ ಸಾಮಾನ್ಯ ಸಭೆಯ ನಡವಳಿಗಳನ್ನು ಮಾನ್ಯ ಕುಲಪತಿಗಳು ಅನುಮೋದಿಸಿದಂತೆ, ಬೆಂಗಳೂರ ವಿಶ್ವವಿದ್ಯಾಲಯದ ಪರಿನಿಯಾಮಾಳಿ 5.16 ರನ್ವಯ ಕಳುಹಿಸುತ್ತಿದ್ದೇನೆ.

ನಡವಳಿಗಳನ್ನು ರವಾನಿಸಿದ ದಿನಾಂಕದಿಂದ ಏಳು ದಿನಗಳೊಳಗಾಗಿ ಸಭೆಯಲ್ಲಿ ಹಾಜರಿದ್ದ ಸದಸ್ಯರು, ನಡವಳಿಗಳ ಬಗ್ಗೆ ಯಾವುದೇ ಆಕ್ಷೇಪಣೆಯನ್ನು ಕಳುಹಿಸದಿದ್ದಲ್ಲಿ, ಮೇಲೆ ಹೇಳಿದ ಪರಿನಿಯಮಾಳಿಗಳ ಅನುಸಾರ ಅವುಗಳನ್ನು ಸ್ಥಿರೀಕರಿಸಲಾಗಿದೆ ಎಂದು ಪರಿಗಣಿಸಲಾಗುವುದು.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ

ಕುಲಸಚಿವರು

ಅಡಕ: ಮೇಲಿನಂತೆ

ಪ್ರತಿಗಳು:
1. ರಾಜ್ಯಪಾಲರ ಕಾರ್ಯದರ್ಶಿಗಳು, ರಾಜಭವನ, ಬೆಂಗಳೂರು– 560 001
2. ಅಪರ ಮುಖ್ಯ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ (ವಿಶ್ವವಿದ್ಯಾಲಯ), ಕರ್ನಾಟಕ ಸರ್ಕಾರ, ಬೆಂಗಳೂರು– 560–001
3. ಕುಲಪತಿಗಳು, ಕುಲಸಚಿವರು, ಕುಲಸಚಿವರು(ಮೌಲ್ಯಮಾಪನ), ವಿತ್ತಾಧಿಕಾರಿಗಳ ಆಪ್ತ ಕಾರ್ಯದರ್ಶಿಗಳಿಗೆ. ಬಿಸಿಯು.
4. ಕಛೇರಿ ಪ್ರತಿ/ರಕ್ಷಾ ಕಡತ

ಬೆಂಗಳೂರು
ನಗರ ವಿಶ್ವವಿದ್ಯಾನಿಲಯ

**BENGALURU
CITY UNIVERSITY**

Office of the Registrar, Central College Campus, Dr. B.R. Ambedkar Veedhi, Bengaluru – 560 001.
PhNo.080-22131385, E-mail: registrarbcu@gmail.com

ಸಂಖ್ಯೆ:ಬಿಸಿಯು/ಎಸ್‌ವೈಎನ್–14/ಸಾಮಾನ್ಯಸಭೆ/231 /2021–22 ದಿನಾಂಕ: 07.10.2021.

ದಿನಾಂಕ 30.09.2021 ರಂದು ಪೂರ್ವಾಹ್ನ 11.00 ಗಂಟೆಗೆ ಬೋರ್ಡ್‌ರೂಮ್, ಜ್ಞಾನಜ್ಯೋತಿ ಸಭಾಂಗಣ, ಅರಮನೆ ರಸ್ತೆ, ಬೆಂಗಳೂರು 560 001 ಇಲ್ಲಿ ಜರುಗಿದ ಸಿಂಡಿಕೇಟ್ 14ನೇ ಸಾಮಾನ್ಯ ಸಭೆಯ ನಡವಳಿಗಳು.

**ಹಾಜರಾದ ಸದಸ್ಯರು:**

| | | |
|---|---|---|
| 1. | ಪ್ರೊ. ಲಿಂಗರಾಜ ಗಾಂಧಿ, ಪಿ.ಹೆಚ್.ಡಿ<br>ಕುಲಪತಿಗಳು, | ಸಭಾಧ್ಯಕ್ಷರು |
| 2. | ಪ್ರೊ. ಕೆ. ರಮೇಶ್ | ಸದಸ್ಯರು |
| 3. | ಡಾ. ಲಿಡಿಯಾ ಪಿ ಸ್ಯಾಮುಯೆಲ್ | ಸದಸ್ಯರು |
| 4. | ಡಾ. ಪಿ. ವಿ. ಪದ್ಮಜಾ | ಸದಸ್ಯರು |
| 5. | ಪ್ರೊ. ಎಂ. ಚಿಕ್ಕಮುನಿಯಪ್ಪ | ಸದಸ್ಯರು |
| 6. | ಶ್ರೀ ಹೆಚ್.ಎನ್. ಹರಿಪ್ರಸಾದ | ಸದಸ್ಯರು |
| 7. | ಶ್ರೀಮತಿ ಜ್ಯೋತಿ ವಿಜಯ್ | ಸದಸ್ಯರು |
| 8. | ಡಾ. ಆರ್.ಕೆ. ಚಂದ್ರನಾಥ್ | ಸದಸ್ಯರು |
| 9. | ಶ್ರೀ ಥಾಮಸ್ ನೀಲಿಯಾರ | ಸದಸ್ಯರು |
| 10. | ಡಾ. ವಿ. ಗಾಯತ್ರಿ | ಸದಸ್ಯರು |
| 11. | ಶ್ರೀ ಮಹಮ್ಮದ್ ಜಿಯಾ ಉಲ್ಲಾಖಾನ್<br>ಪದವಿ ಪೂರ್ವ ಶಿಕ್ಷಣ ಇಲಾಖೆ ನಿರ್ದೇಶಕರ ಪರವಾಗಿ | ಸದಸ್ಯರು |
| 12. | ಪ್ರೊ. ಬಿ. ರಮೇಶ್,<br>ಕುಲಸಚಿವರು (ಮೌಲ್ಯಮಾಪನ) | ಸದಸ್ಯರು |
| 13. | ಶ್ರೀ ಸಿ ಎನ್ ಶ್ರೀಧರ, ಕೆ.ಎಎಸ್<br>ಕುಲಸಚಿವರು | ಸದಸ್ಯ ಕಾರ್ಯದರ್ಶಿಗಳು |

ಕುಲಸಚಿವರು ಸಭೆಗೆ ಆಗಮಿಸಿದ ಎಲ್ಲಾ ಸದಸ್ಯರನ್ನು ಸ್ವಾಗತಿಸಿ, ಅಧ್ಯಕ್ಷರಿಗೆ ಸಭೆ ನಡೆಸಿ ಕೊಡಲು ಕೋರಿದರು.

ಕುಲಪತಿಗಳು ಎಲ್ಲಾ ಸದಸ್ಯರಿಗೆ ಮತ್ತೊಮ್ಮೆ ಸ್ವಾಗತ ಕೋರಿ ವಿಶ್ವವಿದ್ಯಾನಿಲಯದ ವಿವಿಧ ಚಟುವಟಿಕೆಗಳ ಕುರಿತು ವಿವರಿಸಿದರು ನಂತರ ಕುಲಸಚಿವರು ಕಾರ್ಯಸೂಚಿಯ ವಿಷಯಗಳನ್ನು ಸಭೆಯಲ್ಲಿ ಮಂಡಿಸಿದರು.

**ವಿಷಯ ಸಂಖ್ಯೆ 1: ದಿನಾಂಕ 13.08.2021 ರಂದು ಜರುಗಿದ 13ನೇ ಸಿಂಡಿಕೇಟ್ ಸಾಮಾನ್ಯ ಸಭೆಯ ಹಾಗೂ ದಿನಾಂಕ 26.08.2021 ರಂದು ಜರುಗಿದ ಸಿಂಡಿಕೇಟ್ ಅಸಾಮಾನ್ಯ ಸಭೆಯ ನಡವಳಿಗಳನ್ನು ಧೃಢೀಕರಿಸುವ ಕುರಿತು.**

**ಸಿಂಡಿಕೇಟ್ ನಿರ್ಣಯ:**

**ದಿನಾಂಕ 13.08.2021 ರಂದು ಜರುಗಿದ 13ನೇ ಸಿಂಡಿಕೇಟ್ ಸಾಮಾನ್ಯ ಸಭೆಯ ಹಾಗೂ ದಿನಾಂಕ 26.08.2021 ರಂದು ಜರುಗಿದ ಸಿಂಡಿಕೇಟ್ ಅಸಾಮಾನ್ಯ ಸಭೆಗಳ ನಡವಳಿಗಳನ್ನು ಧೃಢೀಕರಿಸಲಾಯಿತು.**

**ವಿಷಯ ಸಂಖ್ಯೆ 2: ದಿನಾಂಕ 13.08.2021 ರಂದು ಜರುಗಿದ 13ನೇ ಸಿಂಡಿಕೇಟ್ ಸಾಮಾನ್ಯ ಸಭೆಯ ಹಾಗೂ ದಿನಾಂಕ 26.08.2021 ರಂದು ಜರುಗಿದ ಸಿಂಡಿಕೇಟ್ ಅಸಾಮಾನ್ಯ ಸಭೆಯ ನಡವಳಿಗಳ ಮೇಲೆ ಕೈಗೊಂಡ ಕ್ರಮಗಳ ವರದಿ.**

**ಸಿಂಡಿಕೇಟ್ ನಿರ್ಣಯ:**

**ದಿನಾಂಕ 13.08.2021 ರಂದು ಜರುಗಿದ 13ನೇ ಸಿಂಡಿಕೇಟ್ ಸಾಮಾನ್ಯ ಸಭೆಯ ಹಾಗೂ ದಿನಾಂಕ 26.08.2021 ರಂದು ಜರುಗಿದ ಸಭೆ ನಡವಳಿಗಳ ಮೇಲೆ ಕೈಕೊಂಡ ಕ್ರಮಗಳ ಅನುಸರಣಾ ವರದಿಗಳನ್ನು ಕೆಳಕಂಡ ಅಭಿಪ್ರಾಯ ಮತ್ತು ಸೂಚನೆಗಳೊಂದಿಗೆ ಅನುಮೋದಿಸಲಾಯಿತು.**

ವಿಷಯ ಸಂಖ್ಯೆ 6: ಮಾನ್ಯ ಸದಸ್ಯರಾದ ಡಾ. ಚಂದ್ರನಾಥ್‌ರವರಿಗೆ ಸೇಂಟ್ ಜೋಸೆಫ್ ಕಾಲೇಜು ಸಲ್ಲಿಸಬೇಕಾದ ಶುಲ್ಕ ಪಾವತಿಸಿದಲ್ಲಿ ಅಧಿಸೂಚನೆ ಹೊರಡಿಸಲಾಗುವುದು ಎಂದು ತಿಳಿಸಲಾಯಿತು.

ವಿಷಯ ಸಂಖ್ಯೆ 9: ಈ ರೀತಿ ಹೆಚ್ಚುವರಿ ಪ್ರವೇಶ ನೀಡಿದ ಇತರೆ ಕಾಲೇಜುಗಳ ಕುರಿತು ಮಾಹಿತಿ ಕೋರಲು, ಕಾಲೇಜುಗಳ ಪ್ರವೇಶ ಸಂಖ್ಯೆಗಿಂತ ಹೆಚ್ಚುವರಿ ಪ್ರವೇಶ ನೀಡಿರುವ ಇತರ ಪ್ರಕರಣಗಳು ಗಮನಕ್ಕೆ ಬಂದಿಲ್ಲ. ಇಂತಹ ಪ್ರಕರಣಗಳನ್ನು ಸ್ವಾಯತ್ತ ಮಹಾವಿದ್ಯಾಲಯಗಳ ವಾರ್ಷಿಕ ಸಮೀಕ್ಷೆಗಾಗಿ ನೇಮಕ ಮಾಡುವ ಸಮಿತಿಗೆ ವಹಿಸಬೇಕಾಗುತ್ತದೆ. ಆದಷ್ಟು ಬೇಗನೇ ವಾರ್ಷಿಕ ಸಮೀಕ್ಷೆಗಾಗಿ ಸಮಿತಿ ರಚಿಸಿ ಪರಿನಿಯಾಮಾವಳಿಗಳು ಹಾಗೂ 2018 ರ ಯುಜಿಸಿ ಮಾರ್ಗಸೂಚಿ ಪ್ರಕಾರ ಕ್ರಮಕೈಕೊಳ್ಳ ಲಾಗುವುದು ಎಂದು ಕುಲಪತಿಗಳು ತಿಳಿಸಿದರು.

ವಿಷಯ ಸಂಖ್ಯೆ 12: ಐದು ಹೊಸ ಸ್ನಾತಕೋತ್ತರ ವಿಭಾಗಗಳ ಕುರಿತಂತೆ ಯುಜಿಸಿ ನಿಯಮಗಳಂತೆ Law & Public Policy ಸ್ನಾತಕೋತ್ತರ ವಿಭಾಗ ಪ್ರಾರಂಭ ಮಾಡುವಲ್ಲಿ ಕೆಲವು ಅತ್ಯಂತ ಕಠಿಣ ಶರತ್ತುಗಳಿವೆ, ಕಾರಣ ಈ ವಿಭಾಗದ ಹೆಸರನ್ನು ಸಾರ್ವಜನಿಕ ನೀತಿ ಮತ್ತು ಆಡಳಿತ (Public Policy & Governance)

ಎಂದು ಬದಲಾಯಿಸಿ ಎಂ.ಎ ವ್ಯಾಸಂಗದ ಅಡಿಯಲ್ಲಿ ಪ್ರಾರಂಭಿಸಲು ಸರ್ಕಾರಕ್ಕೆ ಶಿಫಾರಸ್ಸು ಮಾಡುವ ಪ್ರಸ್ತಾವನೆಗೆ ಸಭೆ ಒಪ್ಪಿಗೆ ನೀಡಿತು.

ವಾಣಿಜ್ಯಶಾಸ್ತ್ರ ವಿಭಾಗವನ್ನು ಬೇಗ ಹೊಸ ಕಟ್ಟಡಕ್ಕೆ ಸ್ಥಳಾಂತರಿಸಲು ಅಗತ್ಯ ಪೀಠೋಪಕರಣ ಖರೀದಿಸಲು ಕ್ರಮ ವಹಿಸಬೇಕೆಂದು ಸೂಚನೆಗೆ ಸಭೆ ಅನುಮೋದನೆ ನೀಡಿತು.

**ವಿಷಯ ಸಂಖ್ಯೆ 3: ವಿಶ್ವವಿದ್ಯಾನಿಲಯದ ಬಹುಶಿಸ್ತೀಯ ಘಟಕ ಮಹಿಳಾ ಕಾಲೇಜಿನ ವಿವಿಧ ವಿಷಯಗಳ ವ್ಯಾಸಂಗಕ್ಕೆ ನಿಗದಿ ಪಡಿಸಿರುವ ಶುಲ್ಕಗಳಿಗೆ ಅನುಮೋದನೆ ನೀಡುವ ಕುರಿತು.**

ಇಂತಹ ಕಾಲೇಜುಗಳನ್ನು ವಿಶ್ವವಿದ್ಯಾನಿಲಯದ ವ್ಯಾಪ್ತಿಯ ಎಲ್ಲಾ ವಿಧಾನ ಸಭಾ ಕ್ಷೇತ್ರಗಳಲ್ಲಿ ಪ್ರಾರಂಭಿಸಿದಲ್ಲಿ ಬಡ ಹಾಗೂ ಮಧ್ಯಮ ವರ್ಗದ ವಿದ್ಯಾರ್ಥಿಗಳ ವ್ಯಾಸಂಗಕ್ಕೆ ಅನುಕೂಲವಾಗುವುದು ಎಂದು ಸದಸ್ಯರು ಅಭಿಪ್ರಾಯ ಪಟ್ಟರು.

**ಸಿಂಡಿಕೇಟ್ ನಿರ್ಣಯ:**

ವಿಶ್ವವಿದ್ಯಾನಿಲಯದ ಬಹುಶಿಸ್ತೀಯ ಘಟಕ ಮಹಿಳಾ ಕಾಲೇಜಿಗೆ ವಿವಿಧ ವ್ಯಾಸಂಗಗಳಿಗೆ ಶುಲ್ಕ ನಿಗದಿಪಡಿಸಿ ಅಧಿಸೂಚನೆ ಹೊರಡಿಸಿದ ಕ್ರಮಕ್ಕೆ ಸಿಂಡಿಕೇಟ್ ಸಭೆ ಅನುಮೋದನೆ ನೀಡಿತು.

**ವಿಷಯ ಸಂಖ್ಯೆ 4 : ಡಾ. ಜ್ಯೋತಿ ವೆಂಕಟೇಶ್, ಸಹ ಪ್ರಾಧ್ಯಾಪಕರು, ಜಾಗತಿಕ ಭಾಷಾ ಕೇಂದ್ರ ಅವರಿಗೆ CAS ಅಡಿಯಲ್ಲಿ ಪ್ರಾಧ್ಯಾಪಕ ಹುದ್ದೆ ಹಂತ-4ಕ್ಕೆ ಸಲ್ಲಿಸಿರುವ ಅರ್ಜಿಯ ಬಗ್ಗೆ.**

**ಸಿಂಡಿಕೇಟ್ ನಿರ್ಣಯ:**

ಪ್ರಸ್ತಾವನೆಗೆ ಒಪ್ಪಿಗೆ ನೀಡಿ ಡಾ. ಜ್ಯೋತಿ ವೆಂಕಟೇಶ್ ಸಹ ಪ್ರಾಧ್ಯಾಪಕರು, ಜಾಗತಿಕ ಭಾಷಾ ಕೇಂದ್ರ ಇವರಿಗೆ ಸಿ.ಎ.ಎಸ್ ಅಡಿಯಲ್ಲಿ ಪ್ರಾಧ್ಯಾಪಕರು ಹಂತ-4ಕ್ಕೆ ಬಡ್ತಿ ನೀಡುವ ಕುರಿತಂತೆ ಅಗತ್ಯ ಪ್ರಕ್ರಿಯೆ ನಡೆಸಿ, ನೇಮಕಾತಿ ಮಂಡಳಿಯ ಶಿಫಾರಸ್ಸು ಈ ವಿಶ್ವವಿದ್ಯಾನಿಲಯಕ್ಕೆ ಕಳಿಸುವಂತೆ ಬೆಂಗಳೂರು ವಿಶ್ವವಿದ್ಯಾನಿಲಯಕ್ಕೆ ವಿನಂತಿಸಲು ಹಾಗೂ ನೇಮಕಾತಿ ಮಂಡಳಿ ಸಭೆ ಜರುಗಿಸಲು ಅಗತ್ಯವಾದ ಖರ್ಚು ವೆಚ್ಚಗಳನ್ನು ಈ ವಿಶ್ವವಿದ್ಯಾನಿಲಯದಿಂದ ಭರಿಸಲು ಸಭೆ ಒಪ್ಪಿಗೆ ನೀಡಿತು.

**ವಿಷಯ ಸಂಖ್ಯೆ 5 : ಬೆಂಗಳೂರು ನಗರ ವಿಶ್ವವಿದ್ಯಾನಿಲಯದ SCSP/TSP ಯೋಜನೆಯಡಿಯಲ್ಲಿ ಇ-ಪ್ರೊಕ್ಯೂರ್ ಮೆಂಟ್ /4ಜಿ ವಿನಾಯಿತಿ ಹೊಂದಿರುವ ಸಂಸ್ಥೆಗಳ ಮೂಲಕ ಲ್ಯಾಪ್‌ಟಾಪ್‌ಗಳನ್ನು ಖರೀದಿ ಮಾಡಲು ಅನುಮೋದನೆ ಕುರಿತು**

**ಸಿಂಡಿಕೇಟ್ ನಿರ್ಣಯ :** ಬೆಂಗಳೂರು ನಗರ ವಿಶ್ವವಿದ್ಯಾನಿಲಯದ SCSP/TSP ಯೋಜನೆಯಡಿಯಲ್ಲಿ ಇ-ಪ್ರೊಕ್ಯೂರ್ ಮೆಂಟ್ /4ಜಿ ವಿನಾಯಿತಿ ಹೊಂದಿರುವ ಸಂಸ್ಥೆಗಳ ಮೂಲಕ ಲ್ಯಾಪ್‌ಟಾಪ್‌ಗಳನ್ನು ಖರೀದಿಸಲು ಸಿಂಡಿಕೇಟ್ ಸಭೆ ಅನುಮೋದನೆ ನೀಡಿತು.

**ವಿಷಯ ಸಂಖ್ಯೆ 6: ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ಕ್ಯಾಂಪಸ್ ಪುನರಾಭಿವೃದ್ಧಿ ಕಾಮಗಾರಿಯನ್ನು ಕೈಗೊಳ್ಳಲು ಮೊದಲ ಕಂತನ್ನು ಬಿಡುಗಡೆಗೊಳಿಸುವ ಕುರಿತು.**

ಕುಲಸಚಿವರು ವಿಷಯವನ್ನು ಪ್ರಸ್ತಾಪಿಸಿ ಸಿಂಡಿಕೇಟ್ ಸಭೆಯ ತೀರ್ಮಾನದಂತೆ, ಕ್ಯಾಂಪಸ್ ಪುನರಾಭಿವೃದ್ಧಿ ಕಾಮಗಾರಿಗಳನ್ನು ಸರ್ಕಾರದ ಸಂಸ್ಥೆಯಾದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಇಂಜಿನಿಯರಿಂಗ್ ಘಟಕಕ್ಕೆ ವಹಿಸಲಾಗಿದ್ದು, ಒಪ್ಪಂದದ ಪ್ರಕಾರ ಕಾಮಗಾರಿಗಳ ಒಟ್ಟು ಮೊತ್ತವಾದ ರೂ. 155.00 ಕೋಟಿಗಳ ಮೊದಲ ಹಂತದ 40% ಮೊತ್ತ, ಅಂದರೆ ರೂ. 62.00 ಕೋಟಿಗಳಲ್ಲಿ ಈಗಾಗಲೇ 25,14,96,311.00 ಗಳನ್ನು ಬಿಡುಗಡೆ ಮಾಡಲಾಗಿದ್ದು ಉಳಿದ 36,85,03,689.00 ಗಳನ್ನು ಬಿಡುಗಡೆ ಮಾಡಬೇಕಾಗಿದೆ ಎಂದು ಸಭೆಯ ಗಮನಕ್ಕೆ ತಂದರು.

ಮಾನ್ಯ ಸದಸ್ಯರಾದ ಶ್ರೀ ಹೆಚ್.ಎನ್. ಹರಿಪ್ರಸಾದ ರವರು ಕ್ಯಾಂಪಸ್ ಪುನರಾಭಿವೃದ್ಧಿ ಸಂಬಂಧಿಸಿದಂತೆ ವಿವಿಧ ಹಂತದ ವಿವರಗಳನ್ನು ಸಿಂಡಿಕೇಟ್ ಸಭೆಗೆ ಒದಗಿಸಬೇಕೆಂದು ತಿಳಿಸಿದರು. ಮಾನ್ಯ ಸದಸ್ಯರಾದ ಶ್ರೀಮತಿ ಜ್ಯೋತಿ ವಿಜಯ್ ರವರು ರೂ. 25,14,96,311.00 ಗಳನ್ನು ಕಟ್ಟಡಗಳ ನವೀಕರಣಕ್ಕೆ ಬಿಡುಗಡೆ ಮಾಡಿರುವುದನ್ನು ತಿಳಿಸಿ, ಆ ಕುರಿತು ವಿವರಗಳನ್ನು ತಿಳಿಸಬೇಕೆಂದು ಹೇಳಿದರು.

ಈ ವಿಷಯ ಕುರಿತಂತೆ ಪ್ರಾರಂಭದಿಂದ ಕೈಗೊಂಡ ಕ್ರಮಗಳ ಕುರಿತು ವಿವರಣೆ ನೀಡಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಇಂಜಿನಿಯರಿಂಗ್ ಘಟಕ ಟೆಂಡರ್ ಪ್ರಕ್ರಿಯೆಯನ್ನು ಪೂರ್ಣಗೊಳಿಸಿದ್ದು, ಕಾರ್ಯಾದೇಶ ನೀಡಿರುತ್ತಾರೆ. ಪೂರ್ವಭಾವಿಯಾಗಿ ಮಾಡಬೇಕಾದ ಎಲ್ಲಾ ಪರಿವೀಕ್ಷಣೆಗಳು ಮತ್ತು ಸಿದ್ಧತೆಗಳು ಮುಗಿದಿದ್ದು, ಕಟ್ಟಡ ಕಾಮಗಾರಿ, ದುರಸ್ತಿ ಹಾಗೂ ನವೀಕರಣ ಕಾರ್ಯ ಬೇಗನೆ ಪ್ರಾರಂಭಿಸಲಿದ್ದಾರೆ, Natural Science Block ಕಟ್ಟಡದ ದುರಸ್ತಿ ಕಾಮಗಾರಿ ನಡೆಯುತ್ತಿದೆ ಎಂದು ಕುಲಸಚಿವರು ತಿಳಿಸಿದರು.

ಈ ಹಂತದಲ್ಲಿ ಸಭಾಧ್ಯಕ್ಷರು ಈ ಯೋಜನೆಯ ವಿವಿಧ ಹಂತಗಳ ಬೆಳವಣಿಗೆಗಳನ್ನು ಸಭೆಗೆ ಕೆಳಗಿನಂತೆ ವಿವರಿಸಿದರು.

ಈ ಕ್ಯಾಂಪಸ್ ಪುನರಾಭಿವೃದ್ಧಿ ಕಾಮಗಾರಿಯ ಚಾಲನೆ ನೀಡಿ ಒಂದುವರೆ ವರ್ಷವಾಗಿದೆ. ದಿನಾಂಕ 16.06.2020 ರ ಸಿಂಡಿಕೇಟ್ ಸಭೆಯಲ್ಲಿ 155.00 ಕೋಟಿ ಮೊತ್ತದ ಕಾಮಗಾರಿಗಳಿಗೆ ಅನುಮೋದನೆ ನೀಡಲಾಗಿದೆ. ಸರ್ಕಾರದ ಆದೇಶ ಸಂಖ್ಯೆ ಇಡಿ 103 ಹೆಚ್‌ಪಿಯು ದಿನಾಂಕ 05.10.2020 ಪ್ರಕಾರ ಕಾಮಗಾರಿಗಳ ಅಂದಾಜು ಪಟ್ಟಿ ಮಾಸ್ಟರ್ ಪ್ಲಾನ್ ವಾಸ್ತುಶಿಲ್ಪ ಸಿದ್ಧಪಡಿಸಲು ಕೆ.ಹೆಚ್.ಎಸ್.ಡಿ.ಆರ್.ಪಿ ಸಂಸ್ಥೆಗೆ ವಹಿಸಿ ಆದೇಶ ನೀಡಲಾಗಿದೆ. ಸರ್ಕಾರದ ಆದೇಶ ಸಂಖ್ಯೆ ಇಡಿ 103 ಹೆಚ್‌ಪಿಯು ದಿನಾಂಕ 13.12.2020 ರಲ್ಲಿ ಸದರಿ ಕಾಮಗಾರಿಗಳಿಗೆ ಆಡಳಿತತ್ಮಾಕ ಅನುಮೋದನೆ ನೀಡಲಾಗಿದೆ. ಈ ಕಾಮಗಾರಿಗಳ ಪ್ರಾತ್ಯಕ್ಷಿಕತೆಯನ್ನು ದಿನಾಂಕ 29.12.2020 ರಂದು ನೀಡಲಾಯಿತು.

ದಿನಾಂಕ 29.12.2020 ಮತ್ತು 18.01.2021 ರಂದು ಜರುಗಿದ ಕಾಮಗಾರಿ ಸಮಿತಿ ಸಭೆ ಅಂದಾಜು ಪಟ್ಟಿ ಮತ್ತು ನಕ್ಷೆಗಳಗೆ ಅನುಮೋದನೆ ನೀಡಿ ಸರ್ಕಾರ ವಹಿಸಲಾದ ಕೆ.ಹೆಚ್.ಎಸ್.ಡಿ.ಆರ್.ಪಿ ಸಂಸ್ಥೆಯಿಂದ ಕಾಮಗಾರಿ ನಿರ್ವಹಣೆಗೆ ಅನುಮೋದನೆ ನೀಡಿರುತ್ತದೆ. ದಿನಾಂಕ 25.02.2021 ರಂದು ಜರುಗಿದ ವಿಶೇಷ ಸಿಂಡಿಕೇಟ್ ಸಭೆ 155.00 ಕೋಟಿ ರೂಪಾಯಿಗಳ ಅಭಿವೃದ್ಧಿ ಯೋಜನೆಗೆ ತಾತ್ವಿಕವಾಗಿ ಅನುಮೋದಿಸಿ ರೂ. 25,14,96,311 ಗಳನ್ನು ಸರ್ಕಾರ ಸೂಚಿಸಿರುವ ಸಂಸ್ಥೆಗೆ ಬಿಡುಗಡೆ ಮಾಡಲು ಸರ್ವಾನುಮತದ ಅನುಮೋದನೆ ನೀಡಿರುತ್ತದೆ. ದಿನಾಂಕ 20.03.2021 ರಂದು ಜರುಗಿದ ಸಿಂಡಿಕೇಟ್ ಅಸಾಮಾನ್ಯ ಸಭೆ ಈ ಕಾಮಗಾರಿಯನ್ನು ಸರ್ಕಾರ ವಹಿಸಿದ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಇಂಜಿನಿಯರಿಂಗ ಘಟಕಕ್ಕೆ ವಹಿಸಿ ಹಂತ ಹಂತವಾಗಿ ಅನುದಾನ ಬಿಡುಗಡೆ ಮಾಡಲು ಒಪ್ಪಿಗೆ ನೀಡಿದೆ. ಆ ನಂತರ ಸರ್ಕಾರದ ಪತ್ರ ಸಂ. ಇಡಿ 103 ಹೆಚ್.ಪಿ.ಯು. 2020 ದಿನಾಂಕ 24.03,2021 ರಲ್ಲಿ ಈ ಕಾಮಗಾರಿಯನ್ನು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಇಂಜಿನಿಯರಿಂಗ ಘಟಕಕ್ಕೆ ವಹಿಸಲು ಸೂಚಿಸಿದೆ. ದಿನಾಂಕ 25.02.2021 ರಂದು ವಿಶ್ವವಿದ್ಯಾನಿಲಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಇಂಜಿನಿಯರಿಂಗ ಘಟಕಕ್ಕೆ ಪತ್ರ ಬರೆದು ಸಿಂಡಿಕೇಟ್ ತೀರ್ಮಾನದಂತೆ ಸದರಿ ಕಾಮಗಾರಿಯನ್ನು ನಿರ್ವಹಿಸಲು ತಿಳಿಸಲಾಗಿದೆ.

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಇಂಜಿನಿಯರಿಂಗ ಘಟಕದ ಕಾರ್ಯಪಾಲಕ ಇಂಜಿನಿಯರರು ದಿನಾಂಕ 13.05.2021 ರಂದು ಪತ್ರ ಬರೆದು ಕಾಮಗಾರಿಯ ಪೂರ್ಣ ಮೊತ್ತವನ್ನು ಬಿಡುಗಡೆ ಮಾಡಲು ವಿನಂತಿಸಿದ್ದಾರೆ. ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಇಂಜಿನಿಯರಿಂಗ ಘಟಕದ ಮುಖ್ಯ ಇಂಜಿನಿಯರರು ದಿನಾಂಕ 28.06.2021 ರಂದು ಪತ್ರ ಬರೆದು ಟೆಂಡರ ಸ್ಕ್ರುಟಿನಿ ಕಮಿಟಿ ಗಳನ್ನು ರಚನೆ ಮಾಡಲು ವಿನಂತಿಸಿದ್ದು ಸಮಿತಿ ರಚಿಸಲಾಗಿದೆ. ನಂತರ ಮುಖ್ಯ ಇಂಜಿನಿಯರರ ದಿನಾಂಕ 27.07.2021 ರಲ್ಲಿ ಸರ್ಕಾರದ ಅನುಮೋದನೆ ಕೋರಿದ್ದು ಕುಲಸಚಿವರು ದಿನಾಂಕ 30-07-2021 ರಂದು ಸರ್ಕಾರಕ್ಕೆ ಪತ್ರ ಬರೆದು ಕಡಿಮೆ ದಠ ನೀಡಿದ ಸಂಸ್ಥೆಗೆ ಕಾರ್ಯಾದೇಶ ನೀಡಲು ಅನುಮೋದನೆ ಕೋರಿರುತ್ತಾರೆ. ಅದರಂತೆ ಸರ್ಕಾರ ದಿನಂದ 06.08.2021 ರಂದು ಪತ್ರ ಸಂ. ಇಡಿ 103 ಹೆಚ್.ಪಿ.ಯು 2020 ರಲ್ಲಿ ಅನುಮೋದನೆ ನೀಡಿರುತ್ತದೆ. ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಇಂಜಿನಿಯರಿಂಗ ಘಟಕದ ಮುಖ್ಯ ಇಂಜಿನಿಯರರು ಮತ್ತು ಕುಲಸಚಿವರು ಮಧ್ಯ ಒಡಂಬಡಿಕೆ ಪತ್ರ ದಿನಾಂಕ 21.08.2021ರಂದು ಸಹಿಮಾಡಲಾಗಿದೆ. ಸದರಿ ಒಡಂಬಡಿಕೆ ಪತ್ರದ ಪ್ರಕಾರ ಒಟ್ಟು ಕಾಮಗಾರಿ ಮೊತ್ತ ರೂ. 155 ಕೋಟಿಗಳ 40% ಅಂದರೆ ರೂ. 62.00 ಕೋಟಿಗಳನ್ನು ಬಿಡುಗಡೆ ಮಾಡಬೇಕಾಗಿದೆ. ಇದರಲ್ಲಿ ರೂ. 25,14,96,311-00 ಗಳನ್ನು ದಿನಾಂಕ 01.09.2021 ರಂದು ಬಿಡುಗಡೆ ಮಾಡಲಾಗಿದೆ. ಟೆಂಡರ್ ದಾಖಲೆಯಲ್ಲಿ ಕಾಮಗಾರಿ ಮುಕ್ತಾಯಗೊಳಿಸುವ ಅವಧಿ ನಮೂದಿಸಿರುತ್ತಾರೆ. ಅದನ್ನು ಉಲ್ಲಂಘಿಸಿದರೆ, ದಂಡ ವಿಧಿಸಲು ಅವಕಾಶವಿರುತ್ತದೆ.

ವಿಶ್ವವಿದ್ಯಾನಿಲಯ ಧನಸಹಾಯ ಆಯೋಗದ 12(ಬಿ) ಮಾನ್ಯತೆ ಪಡೆಯವುದು ವಿಶ್ವವಿದ್ಯಾನಿಲಯಕ್ಕೆ ಅತ್ಯಂತ ಅಗತ್ಯವಾಗಿದೆ. ಹಿಂದೆ ಸಲ್ಲಿಸಿದ ಅರ್ಜಿ ತಿರಸ್ಕಾರಗೊಂಡಿದೆ. 12(ಬಿ) ಮಾನ್ಯತೆಯನ್ನು ಪಡೆಯಲು ಶೈಕ್ಷಣಿಕ ಕಟ್ಟಡ, ICT ಮತ್ತು ಪ್ರಾಧ್ಯಾಪಕರ ನೇಮಕಾತಿ ಇವು ಮೂಲಭೂತ ಅಗತ್ಯಗಳಾಗಿವೆ, ಈ ಮಾನ್ಯತೆ ಇಲ್ಲದಿದ್ದರೆ, ಮುಜುಗರದ ಸನ್ನಿವೇಶ ಎದುರಿಸಬೇಕಾಗುತ್ತದೆ. ಕಾರಣ ಕಟ್ಟಡಗಳ ನಿರ್ಮಾಣವಾದರೆ, ಯು.ಜಿಸಿ ಮಾನ್ಯತೆಗಾಗಿ ಮತ್ತೊಮ್ಮೆ ಪ್ರಸ್ತಾವನೆ ಸಲ್ಲಿಸಲು ಸಾಧ್ಯವಾಗುತ್ತದೆ ಎಂದು ಹೇಳಿ ಸಭೆ ಇದನ್ನು ಗಂಭೀರವಾಗಿ ಪರಿಗಣಿಸಬೇಕೆಂದು ಕೋರಿದರು.

ಮಾನ್ಯ ಸದಸ್ಯರಾದ ಡಾ: ಆರ್.ಕೆ. ಚಂದ್ರನಾಥ್ ರವರು ಈಗ ಬಿಡುಗಡೆ ಮಾಡಲು ಪ್ರಸ್ತಾಪಿಸಿರುವ ರೂ.36,85,03,389.00 ಗಳು ಮೊದಲ ಹಂತದ ರೂ.62.00 ಕೋಟಿಗಳ ಭಾಗವಾಗಿರುವುದರಿಂದ ಬಿಡುಗಡೆ ಮಾಡಬಹುದೆಂದು ಹೇಳಿದರು.

**ಸಿಂಡಿಕೇಟ್ ನಿರ್ಣಯ:**

**ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ಕ್ಯಾಂಪಸ್ ಪುನರಾಭಿವೃದ್ಧಿ ಕಾಮಗಾರಿಯ ಮೊದಲ ಹಂತದ ಭಾಗವಾಗಿ ರೂ. 36,85,03,689 (ರೂಪಾಯಿ ಮೂವತ್ತಾರು ಕೋಟಿ ಎಂಭತ್ತೈದು ಲಕ್ಷ ಮೂರು ಸಾವಿರದ ಆರುನೂರಾ ಎಂಭತ್ತೊಂಭತ್ತು ಮಾತ್ರ) ಗಳನ್ನು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಇಂಜಿನಿಯರಿಂಗ್ ಘಟಕಕ್ಕೆ ಬಿಡುಗಡೆ ಮಾಡಲು ಸಭೆ ಒಪ್ಪಿಗೆ ನೀಡಿತು. ಕಾಮಗಾರಿಗಳ ಮೇಲ್ವಿಚಾರಣೆಗೆ ಕುಲಪತಿಗಳ ಅಧ್ಯಕ್ಷತೆಯಲ್ಲಿ ಪ್ರಾಜಕ್ಟ ಮಾನಿಟರಿಂಗ್ ಕಮಿಟಿ ರಚಿಸಲು ಸಭೆ ಒಪ್ಪಿಗೆ ನೀಡಿತು.**

**ಮಾನ್ಯ ಸದಸ್ಯರಾದ ಶ್ರೀಮತಿ ಜ್ಯೋತಿ ವಿಜಯ್ ಅವರು ಮೇಲಿನ ತೀರ್ಮಾನಕ್ಕೆ ತಮ್ಮ ಅಸಮ್ಮತಿ ಸೂಚಿಸಿದರು.**

**<u>ಅಧ್ಯಕ್ಷರ ಅನುಮತಿಯ ಮೇರೆಗೆ ಇತರ ವಿಷಯಗಳು</u>**

(1) ಮಾನ್ಯ ಸದಸ್ಯರಾದ ಶ್ರೀ ಹೆಚ್.ಎನ್. ಹರಿಪ್ರಸಾದ ರವರು ಪ್ರಸ್ತಾಪಿಸಿದ ವಿದ್ಯಾರ್ಥಿಗಳ ಆರೋಗ್ಯ ವಿವೆ ಕುರಿತಂತೆ ಅಗತ್ಯ ಕ್ರಮ ಕೈಕೊಳ್ಳುವುದಾಗಿ ತಿಳಿಸಲಾಯಿತು.

(2) ನಿಗದಿತ ಪ್ರವೇಶ ಮಿತಿಗಿಂತ 20% ಹೆಚ್ಚುವರಿ ವಿದ್ಯಾರ್ಥಿಗಳ ಪ್ರವೇಶಕ್ಕೆ ಸರ್ಕಾರ ನೀಡಿರುವ ಅನುಮತಿ ಕಲಾ, ವಿಜ್ಞಾನ, ವಾಣಿಜ್ಯ ನಿಕಾಯದ ಎಲ್ಲಾ ಕೋರ್ಸುಗಳಿಗೆ ಅನ್ವಯವಾಗುತ್ತದೆ ಎಂದು ಕುಲಪತಿಗಳು ತಿಳಿಸಿದರು.

(3) ಮಾನ್ಯ ಸದಸ್ಯರಾದ ಪ್ರೊ ಕೆ. ರಮೇಶ್ ರವರು, 2018-19 ನೇ ಸಾಲಿನ **ಲೆಕ್ಕ ಪರಿಶೋಧನೆಯ ಸಂಬಂದಿಸಿದ ಕಾಲೇಜುಗಳಿಗೆ ನೀಡಿದ ನೋಟೀಸು ಕುರಿತಂತೆ** ಮಹಾವಿದ್ಯಾಲಯಗಳು ವಾಸ್ತವಾಂಶಗಳ ವರದಿ ನೀಡಿದಲ್ಲಿ ಆಕ್ಷೇಪಣೆ/ವಸೂಲಾತಿ ಕೈಬಿಡಲು ವಿನಂತಿಸಲಾಗುವುದು ಎಂದು ಹೇಳಿದರು.

(4) ಮಾನ್ಯ ಸದಸ್ಯರಾದ ಶ್ರೀಮತಿ ಜ್ಯೋತಿ ವಿಜಯ್ ರವರು Cost Management ವಿಷಯದ ಪರೀಕ್ಷೆಯ ಸಂದರ್ಭದಲ್ಲಿ ಪ್ರಶ್ನೆ ಪತ್ರಿಕೆ ವಿದ್ಯಾರ್ಥಿಗಳಿಗೆ ನೀಡಿದ ಮೇಲೆ ಅದನ್ನು ಹಿಂದಕ್ಕೆ ಪಡೆದು ಕೆಲ ಸಮಯದ ನಂತರ ಇ-ಮೇಲ್‌ನಲ್ಲಿ ಪ್ರಶ್ನೆ ಪತ್ರಿಕೆಯನ್ನು ಕಳುಹಿಸಿ ಪರೀಕ್ಷೆ ನಡೆಸಲಾಗಿರುವ ಕುಲಸಚಿವರು (ಮೌಲ್ಯಮಾಪನ) ರವರು ವಿವರಣೆ ನೀಡಿದರು. ಗ್ರಂಥಾಲಯದಲ್ಲಿ ಸೇವೆಸಲ್ಲಿಸುತ್ತಿರುವ 3 ಜನ ಸಿಬ್ಬಂದಿಗಳ ಸಂಬಳ ಪಾವತಿಸಲು ಕ್ರಮ ಕೈಕೊಳ್ಳಲಾಗುವುದು ಎಂದು ಹೇಳಿದರು. ಸಕಾರದಿಂದ ಮಹಾವಿದ್ಯಾಲಯಗಳಿಗೆ ಹೆಚ್ಚುವರಿ ಕೋರ್ಸುಗಳನ್ನು ಮಂಜೂರಿಸುವ ಲಭ್ಯವಿರುವ ಮಾಹಿತಿಯನ್ನು ಒದಗಿಸಲಾಗುವುದು ಎಂದು ತಿಳಿಸಲಾಯಿತು.

(5) ಈ ಸಲದ viva-voce ಪರೀಕ್ಷೆಗಳನ್ನು ಯಾವುದೇ ಲೋಪದೋಷಗಳಿಲ್ಲದೇ ಅಚ್ಚುಕಟ್ಟಾಗಿ ಜರುಗಿವೆ. ಅದಕ್ಕಾಗಿ ವಿಶ್ವವಿದ್ಯಾನಿಲಯದ ಅಧಿಕಾರಿಗಳು ಮತ್ತು ಕುಲಪತಿಗಳಿಗೆ ಅಭಿನಂದನೆಗಳನ್ನು ಸಲ್ಲಿಸಿದರು.

(6) ವಿಶ್ವವಿದ್ಯಾನಿಲಯದ ಘಟಿಕೋತ್ಸವ ಕುರಿತಂತೆ ಕೋರಿದ ಮಾಹಿತಿ ಬಗ್ಗೆ ಕುಲಪತಿಗಳು ಅಗತ್ಯ ಮಾಹಿತಿ ನೀಡಿದರು.

ಕುಲಸಚಿವರ ವಂದನಾರ್ಪಣೆ ಹಾಗೂ ರಾಷ್ಟ್ರಗೀತೆಯೊಂದಿಗೆ ಸಭೆ ಮುಕ್ತಾಯವಾಯಿತು.

ಕುಲಸಚಿವರು
ಸದಸ್ಯ ಕಾರ್ಯದರ್ಶಿಗಳು

ಕುಲಪತಿಗಳು
ಸಭಾಧ್ಯಕ್ಷರು